ಪ್ರೊಸೀಡಿಂಗ್ಸ್ ಬಗ್ಗೆ ಹಿಂದೆ ಕೂಡ ಹೇಳಿದ್ದೆ, ಅದರ ಬಗ್ಗೆ ಕೂಡ ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣಲಿಲ್ಲ. ಕನ್‌ಸಿಲಿಯೇಷನ್‌ನಿಂದ ಹಿಡಿದು ಕಮಿಷನರಿಗೆ ಹೋಗಿ ನಿಮ್ಮ ಹತ್ತಿರ ಬರುವುದಕ್ಕೆ 3–4 ತಿಂಗಳು ಆಗುತ್ತದೆ, ಒಂದೂವರೆ ತಿಂಗಳಿನಲ್ಲಿ ಇದನ್ನು ಮಾಡಿ ಮುಗಿಸುವ ಹಾಗೆ ಕಾರ್ಯಕ್ರಮ ಹಾಕಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಡಿಸ್‌ಪ್ಯೂಟ್ಸ್ ರೆಫರ್ ಮಾಡುವ ವಿಷಯದಲ್ಲಿ ಪದೇ ಪದೇ ಹೇಳಿದ್ದೇನೆ, ಸೆಂಟ್ರಲ್ ಗವರ್ನ್‌ಮೆಂಟ್ ಅಂಡರ್‌ಟೇಕಿಂಗ್ಸ್ ವಿಷಯದಲ್ಲಿ, ಭಾರತ್ ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ ನಮ್ಮ ಡಿಮ್ಯಾಂಡ್ಸ್ ಹಾಗೆಯೇ ಉಳಿಯುತ್ತಾ ಇದೆ. ಇದು ಸರಿಯಾದ್ದಲ್ಲ.

ಹೈಕೋರ್ಟ್ ಕೇಸುಗಳು, ಇದಕ್ಕೇ ಒಂದು ಲೇಬರ್ ಬೆಂಚ್ ಮಾಡಬೇಕೆಂದು ಕೇಳಿದಾಗ ಶ್ರೀ ದೇವರಾಜ ಅರಸ್ ಅವರು ಈ ವಿಷಯದಲ್ಲಿ ಆಶ್ವಾಸನೆ ಕೊಟ್ಟಿದ್ದರು, ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡಿಲ್ಲ.

ಸ್ಟ್ಯಾಂಪ್ ಆಫಿಕ್ಸ್ ಮಾಡುವ ವಿಷಯದಲ್ಲಿ ಹೋದ ಸಲ ಸ್ಪಷ್ಟವಾಗಿ ಹೇಳಿದ್ದೇನೆ. ಮತ್ತು ಮಾನ್ಯ ಮಂತ್ರಿಗಳೂ ಕೂಡ ಆಶ್ವಾಸನೆ ಕೊಟ್ಟಿದ್ದರು, ಆ ಬಗ್ಗೆ ಕೂಡ ಇದುವರೆಗೂ ಏನೂ ಮಾಡಿಲ್ಲ.

ಟ್ರಿಬ್ಯೂನಲ್‌ಗಳಿಗೆ ಅಗತ್ಯವಾಗಿ ಬೇಕಾದ ಕಟ್ಟಡಗಳ ಬಗ್ಗೆ ಈ ಹಿಂದೆ ಹೇಳಿದ್ದೆ. ಈಗ ಇರುವ ಕಟ್ಟಡವನ್ನೇ ಹಿಂದೂ ಪತ್ರಿಕೆಗೆ ಕೊಡಬೇಕೆಂದು ಹೊರಟಿದ್ದೀರಿ, ಇದು ಸರಿಯಲ್ಲ ಎಂದು ಹೇಳಬೇಕಾಗಿದೆ.

ಕಾಸ್ಟ್ ಆಫ್ ಲಿವಿಂಗ್ ಇಂಡೆಕ್ಸ್ ಬಗ್ಗೆ ತಾವು ಒಂದು ಎಕ್ಸ್‌ಪರ್ಟ್ ಕಮಿಟಿ ಮಾಡಿದ್ದಿರಿ, ಅದರ ರಿಪೋರ್ಟ್ ಏನಾಯಿತು ?

Business of the House

†Sri **S. SIVAPPA** (Sravanabelagola).—Sir, I rise on a point of procedure. Today in the programme we find certain items included which were not discussed in the Business Advisory Committee. An important item like the Supplementary Estimates amounting to nearly 57 crores has been included suddenly ; it is almost a budget. It is impossible for us to discuss it today. Do not make this Assembly a show piece. If at all there should be discussion, there should be full discussion and full justice should be done to the items included in the agenda. The budget programme this year is very bad. Because this Government could not print the budget in time ; for their folly we are made to sit day in and day out both in the mornings and evenings. I advised them to take a vote on account. Even that has been rejected. They have now decided to bring a 50 crores Supplementary Estimates and push it through. We are not prepared to discuss it. I want you to adjourn the House immediately and call the Business Advisory Committee and re-arrange the whole programme. Otherwise, no useful purpose will be served by our sitting in this House participating in the discussions. Today many demands have been clubbed together in the agenda. Is it over possible to bestow attention on them all and contribute anything useful to the discussion ? Why this hustling through ? This won't help the process of parliamentary discussion. I know you will try to persuade the Government but it is dead wood. They want to have everything and they are prepared to yield. Therefore, I want you to summon the

(SRI S. SIVAPPA)

Chief Minister and re-arrange the entire programme. I have been trying to persuade members on this side. They are very much agitated. They want to participate in so many demands. Everyone is making a request for some time to speak. I know it is almost impossible for any Speaker to give time for all. If the Parliamentary Affairs Minister makes up his mind, he can advise the Government. A strong case has been made out by the hon. member Sri Nanje Gowda for a debate on the increase in the Electricity tariff. Besides, the Finance Commission's recommendations are not available yet. The Fourth Plan final shape is not yet known. In spite of all this, we are discussing and discussing. I sincerely suggested to the Government to take a vote on account. Even now it is not too late because the Appropriation Bill has not been passed. We can take vote on account for a period of three months and discuss in detail the remaining demands and supplementary demands.

Sri B. P. GANGADHAR (Tumkur).—Sir, not even 5 minutes has been allotted to me to speak on any demand. The attitude which the Speaker adopts towards some members is not proper. The Chair must treat all equally.

ಅಧ್ಯಕ್ಷರು.—ತಾವು ಕೂಡ್ರೀ, ಶ್ರೀಮಾನ್ ಸಿದ್ಧವೀರಪ್ಪನವರೇನೋ ಹೇಳಲಿಕ್ಕೆ ಹೊರಟಿದ್ದಾರೆ.

ಶ್ರೀ ಬಿ. ಪಿ. ಗಂಗಾಧರ್.—ಕೂಡ್ರಿ ಅಂತ ಹೇಳುವುದೊಂದೇ ನಿಮ್ಮ ತಕ್ಷಪೊ?

ಅಧ್ಯಕ್ಷರು.—ತಾವು ಸ್ವಲ್ಪ ಕೂಡ್ರೀ.

Sri H. SIDDAVEERAPPA.—Sir, I just wanted to say that in the programme I do not think you have added the Supplementary Demands. If it is there, it is inexcusable. We can never be a party to it for the reason that the amount covered by the Supplementary Demands is not Rs.60 crores as mentioned by the Hon. Member Sri Sivappa but it is Rs.79 crores and odd including charged items. The most important and controverstial subject is Electricity Board. Probably members may be correct when they say that there is an air of unreality about the discussions going on here—nothing substantial and nothing contributory. It is something like ಓಲಗವನ್ನು ಊದುತ್ತಿದ್ದಾಗ ಡೋಲನ್ನು ಬಡಿಯುತ್ತಿದ್ದಾಗ, ಪುರೋಹಿತ ಮಂತ್ರಗಳನ್ನು ಹೇಳಿದನೋ ಇಲ್ಲವೋ ಗೊತ್ತಿರುವುದಿಲ್ಲ, ಅಂತೂ ಹೆಣ್ಣಿಗೆ ತಾಳಿ ಕಟ್ಟಿಬಿಡಿ ಎಂದು ಹೇಳಿದಂತಿದೆ. Some of us feel so fidgety about it. We cannot make any useful contribution as we have been making in the previous years' sessions. We know the difficulties and that is why we requested the Hon. Minister for Parliamentary Affairs as their spokesman and also the Finance Minister to take a vote on account for three months as in Maharashtra or some other State.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ಅಧ್ಯಕ್ಷರು ತಮ್ಮ ಆಫೀಸಿನ ಪ್ರೊಸೀಜರ್ ಪ್ರಕಾರ ರೂಲ್ 27 ರಲ್ಲಿ ಹೇಳಿರುವಂತೆ ಮೊದಲು ಹೊರಡಿಸಿದ್ದ ಆ ಬಿಜಿನೆಸ್ ಅಡ್ವೈಜರಿ ಸಮಿತಿಯ ವರದಿಯಲ್ಲಿ ಮೆಡಿಕರ್ ಮತ್ತು ಪಬ್ಲಿಕ್ ಹೆಲ್ತ್ ಡಿಮ್ಯಾಂಡುಗಳನ್ನು ಸೇರಿಸಿತ್ತು.

ಅದರಂತೆ ಕೆಲಸಗಳಾಗಲಿಲ್ಲ. ಆನಂತರ ಹೊರಡಿಸಿದ್ದ ಬಿಜಿನೆಸ್ ಅಡ್ವೈಜರಿ ಸಮಿತಿ ವರದಿಯಲ್ಲಿ ಈ ವಿಚಾರವಿಲ್ಲ. ಹಾಗಾದರೂ ಈ ದಿವಸ ಅದು ಹೇಗೆ ಈ ಲಸ್ಟ್ ಆಫ್ ಬಿಜಿನೆಸ್ಸಿನಲ್ಲಿ ಸೇರಿ ಕೊಂಡಿತೋ ಗೊತ್ತಾಗಲಿಲ್ಲ.

Sri H. SIDDAVEERAPPA.—I request the Chair to give full scope and latitude for Members. Most tired of all is the Press; they have to sit here until 10 O'Clock; what report can they make? With all this, even now, as suggested by my friend, the Leader of the Opposition, if the Government are amenable for taking Vote-on-account for all these things, you may devote tomorrow exclusively fos Supplementary Grants because they will come during the course of the year. They may be taken at leisure in the month of April. I personally feel no useful purpose will be served by the Members on this side talking any further on these Demands. At every stage, you rush through and rush through. For no fault of ours, you go on banging the bell and the Members go on unheeding your signal. All these kinds of things should not be continued any longer. We have tolerated all this sufficiently. If the purpose is only to take vote on these demands by the end of to-day let them do it now, put all the demands, we will all go away because no useful purpose will be served and none of us could participate in this discussion if it is allowed to go on.

Mr. SPEAKER.—We are short of time. Let us make the best use of it.

ಶ್ರೀ ಎಚ್. ಎನ್. ನಂಜೇಗೌಡ.—ಬಿಜಿನೆಸ್ ಅಡ್ವೈಜರಿ ಕಮಿಟಿ ವರದಿಯಲ್ಲಿಲ್ಲದ ವಿಚಾರ ಹೇಗೆ ಈ ದಿವಸದ ಲಸ್ಟಾಫ್ ಬಿಸಿನೆಸ್ಸಿನಲ್ಲಿ ಸೇರಿಸಲಾಯಿತು?

Mr. SPEAKER.—I shall call the representatives and discuss the matter; I have done exactly in accordance with the decision taken by them. I have not made any departure. I will point that out.

Sri AZEEZ SAIT (Narasimharaja).—Before you call the Minister for Parliamentary Affairs to help you or guide you in the matter, I just want you to understand one thing which commonsense tells us. Major Demands like Labour and Employment, Parliament and Legislature, Administration of Justice, Medical and Public Health and so many other demands, on which crores of rupees have been wasted and no benefit has been derived, have been forced upon Members today. Have we come here as show-boys? You snub us and do not allow us to express our views freely and then name the Members.

Mr. SPEAKER.—The Hon. member is entirely wrong. I have done what both sides have agreed to.

Sri H. N. NANJE GOWDA.—Our Leader says that these were not included.

ಶ್ರೀ ಅಜೀಜ್ ಸೇಟ್.—ಅಷ್ಟೇ ಅಲ್ಲ, ಮಂತ್ರಿಗಳೇನಾದರೂ ಮಾತನಾಡುವುದಕ್ಕೆ ಎದ್ದರೆ ಅವರಿಗೆ ಗಂಟೆಗಟ್ಟಲೆ ಅವಕಾಶ ಕೊಡುತ್ತಾರೆ. ನಮಗೆ ಅವಕಾಶ ಕೊಡುತ್ತಿಲ್ಲ. ಮಂತ್ರಿಗಳಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಹಾಗೆ ನಮಗೂ ಏಕೆ ಮಾತನಾಡಲು ಅವಕಾಶ ಕೊಡ ಬಾರದು! ನಮ್ಮನ್ನು ಜನರು ಏತಕ್ಕೆ ಇಲ್ಲಿಗೆ ಓಟ್‌ಕೊಟ್ಟು ಕಳುಹಿಸಿರುವುದು? ನಮಗೇನೂ ಇಲ್ಲಿ ಮಾನ ಮರ್ಯಾದೆಗಳಿಲ್ಲವೋ?

ಅಧ್ಯಕ್ಷರು.—ಮಾನ್ಯ ಸದಸ್ಯರು ದಯವಿಟ್ಟು ಕೂಡ್ರಲಿಕ್ಕೇ ಬೇಕು.

ಶ್ರೀ ಅಜೀಜ್ ಸೇಟ್.—ಅಧ್ಯಕ್ಷರೇ, ತಾವು ಬಹಳ ಇನ್‌ಸಲ್ಟಿಂಗ್ ಲ್ಯಾಂಗ್ವೇಜನ್ನು ಉಪಯೋಗ ಮಾಡುತ್ತಿದ್ದೀರಿ. ನಾನು ತಮಗೆ ಸ್ಯಾಮಿ, ಅಧ್ಯಕ್ಷರೇ ದಯವಿಟ್ಟು ಕೇಳಬೇಕು ಎಂದು ಹೇಳುತ್ತಿದ್ದರೆ ತಾವು ಕೂತ್ಕೋ ಅಂತ ಹೇಳುತ್ತಿರುವುದು it is a very insulting thing. ನಿಮಗೆ ಸರಿಯಾಗಿ ಕನ್ನಡ ಮಾತನಾಡುವುದಕ್ಕೆ ಬಾರದಿದ್ದರೆ ಇಂಗ್ಲೀಷಿನಲ್ಲಿ ಮಾತನಾಡಿ. ಇನ್‌ಸಲ್ಟ್ ಮಾಡಬೇಡಿ.

Mr. SPEAKER.—Please sit down.

ಶ್ರೀ ಅಜೀಜ್ ಸೇಟ್.—ಈಗ ಈ ಮನೆಯನ್ನು ಅಡ್‌ಜರ್ನ್ ಮಾಡಬೇಕು...

If you cannot understand Kannada, speak in English.

Mr. SPEAKER.—ಕೂತ್ಕೊಳ್ಳಿ is taken to be a good word. Please sit down ಅಂದರೆ ದಯವಿಟ್ಟು ಕೂಡ್ರಿ ಅಂತ. I do not find any justification for the wrangle on the part of my learned friend Sri Azeez Sait. It was unfair on his part. The work of the House is done in accordance with the agreement arrived at. I shall be meeting the Hon. Leaders of both sides ; when I discuss the whole thing with them, I shall establish that the business is arranged according to the decisions agreed to. So, there should be no more talk about it in this House. After the Debate is resumed, I shall speak to the leaders of both the sides in my Chambers.

I would like to hear what the Hon. Minister for Parliamentary Affairs wants to say.

ಶ್ರೀ ಕೆ. ಪುಟ್ಟಸ್ವಾಮಿ.—ವಿರೋಧಪಕ್ಷದ ನಾಯಕರು ನಮಗೆ ತೋರಿಸಿದಂಥ ಐಕಮತ್ಯಕ್ಕೆ ನಾನು ಕೃತಜ್ಞನಾಗಿದ್ದೇನೆ. ಈಗಲೂ ನಾವು ಒಪ್ಪಿದರೆ ಮೂರು ತಿಂಗಳಿಗೆ ಬೇಕಾದ್ದಂಥ ಹಣವನ್ನು ಮಂಜೂರು ಮಾಡುವುದಕ್ಕೆ ಸಿದ್ಧರಾಗಿದ್ದೇವೆ, ಆಮೇಲೆ ಈ ಆಯವ್ಯಯ ಪಟ್ಟಿಯ ವಿಚಾರವಾಗಿ ಚರ್ಚೆಮಾಡುವುದಕ್ಕೆ ಅವಕಾಶವಿದೆಯೆಂದು ಹೇಳಿದರು. ಮತ್ತೆ ಇನ್ನೊಂದು ವಿಚಾರ ಹೇಳಿದರು, ಸರ್ಕಾರ ವಿರೋಧಪಕ್ಷದವರ ಕೋರಿಕೆಗೆ ಯಾವ ವಿಧವಾದಂಥ ಪುರಸ್ಕಾರ ಕೊಡುತ್ತಿಲ್ಲ. ಬಜೆಟ್ ಪ್ರಿಂಟ್ ಮಾಡಿಸುವುದಕ್ಕೆ ಆಗದೆ ಸಕಾಲದಲ್ಲಿ ಮಂಡಿಸಲಿಲ್ಲ, ಸಾಕಷ್ಟು ಕಾಲದಲ್ಲಿ ಕೂಡಲಿಲ್ಲವೆಂದು ಹೇಳಿದರು. ಈಗ ನಾನು ಆ ವಿಚಾರವನ್ನು ಹಂತ ಹಂತವಾಗಿ ಹೇಳುವುದಾದರೆ ಬಹಳ ಸಮಯ ಬೇಕಾಗುತ್ತದೆ. ಆದ್ದರಿಂದ ಆ ವಿಚಾರಗಳನ್ನು ಹೆಚ್ಚು ಪ್ರಸ್ತಾಪ ಮಾಡುವುದಕ್ಕೆ ನಾನು ಅಪೇಕ್ಷೆ ಪಡುವುದಿಲ್ಲ. ಯಾವುದೇ ಕಾಲಕ್ಕೆ ಫೆಬ್ರುವರಿ 24 ನೇ ತಾರೀಖು ಬಜೆಟ್ ಮಂಡನೆಯಾದ ಕಾಲ ಇಲ್ಲ. ಮಾನ್ಯ ಶ್ರೀ ಸಿದ್ಧವೀರಪ್ಪನವರು ಈ ದೇಶದ ಆಡಳಿತ ಜವಾಬ್ದಾರಿಯನ್ನು ಹೊತ್ತಿದ್ದರು. ಮಾರ್ಚ್‌ನಲ್ಲಿ ಬಜೆಟ್ ಮಂಡಣೆ ಆಗುತ್ತಿತ್ತು. ಮಾರ್ಚ್ 31ಕ್ಕೆ ಮುಗಿಯುತ್ತಿತ್ತು. ಈ ವರ್ಷ ಈ ಮಾನ್ಯ ಸಭೆಗೆ ಹೆಚ್ಚಿನ ಅವಕಾಶಕೊಡಬೇಕೆಂಬ ಉದ್ದೇಶವಿಂದ ಆದಷ್ಟು ಜಾಗ್ರತೆ ಈ ಬಜೆಟ್ಟನ್ನು ಮುಂಚಿತವಾಗಿಯೇ ಮಂಡಿಸಲಾಗಿತ್ತು.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಎಂತೆಂತಹ ಘಟಾನುಘಟಿಗಳು ಬಂದಿದ್ದಾರೆ? ಹಿಂದೆ 'ಬಿ' ಸ್ಪೇಟ್ ಬಜೆಟ್ ಇತ್ತು. ಈಗ 'ಎ' ಸ್ಪೇಟ್ ಆಗಿದೆ.

ಶ್ರೀ ಅಜೀಜ್ ಸೇಟ್.—ಶ್ರೀ ಪುಟ್ಟಸ್ವಾಮಿಯವರು ಯಾವಾಗಲೂ ನೇರವಾಗಿ ವಿಷಯವನ್ನಾಡುವುದಿಲ್ಲ. Please adjourn the House and then call the leaders to your Chamber, discuss and then come to a conclusion.

Mr. SPEAKER.—I do not want the Hon'ble Member's direction.

Sri AZEEZ SAIT.—I am not directing you. I am requesting you.

Mr. SPEAKER.—Please resume your seat.

ಶ್ರೀ ಅಜೀಜ್ ಸೇಟ್.—ತಾವು ಯಾವಾಗಲೂ 'ರೆಸ್ಯೂಮ್ ಯುವರ್ ಸೀಟ್' ಎಂದು ಹೇಳುತ್ತಿದ್ದೀರಿ. ಆ ರೀತಿ ಹೇಳುತ್ತಾ ಇದ್ದರೆ, ನಾನು ನಿಂತುಕೊಂಡು ಧರಣಿ ಮುಷ್ಕರ ಮಾಡಬೇಕಾಗುತ್ತದೆ.

Mr. SPEAKER.—A member ought to behave in a fitting manner.

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಶ್ರೀ ಸಿದ್ದವೀರಪ್ಪನವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆ ಕಾಲದಲ್ಲಿ ನಷ್ಟೆದಂಥ ಕೆಲಸಗಳಿಗಿಂತ ಈಗ ಚೆನ್ನಾಗಿದೆ. ಇವತ್ತು ಘಟಾನುಘಟಿಗಳು ಬಂದಿದ್ದಾರೆ. ಅದನ್ನು ಒಪ್ಪುತ್ತೇನೆ. ಆ ಕಾಲದಲ್ಲಿದ್ದವರಿಗಿಂತ ಈಗ ಹೆಚ್ಚಿನ ಬುದ್ಧಿವಂತರು ಬಂದಿದ್ದಾರೆಂದು ನಾನು ಹೇಳುತ್ತೇನೆ. ವ್ಯೆಯುಕ್ತಿಕವಾಗಿ ಹೇಳುವುದಾದರೆ, ನಾವು ಯಾವಾಗಲೂ ಕಾಲ ಕಳೆದಿಲ್ಲ. ಹೆಚ್ಚಿನ ಬುದ್ಧಿವಂತರೇನೋ ಬರುತ್ತಾರೆ. ಇದುವರೆಗೂ ಏನು ಜ್ಞಾನಶೇಖರಣೆ ಯಾಗಿದೆಯೋ ಅದರ ಪ್ರಯೋಜನ ಅವರಿಗೆ ಇರುತ್ತದೆ. ಆದ್ದರಿಂದ ಅವರು ಯಾವಾಗಲೂ ಒಂದು ಅಡ್ವಾಂಟೇಜ್ ಪೊಸಿಷನ್‌ನಲ್ಲಿಯೇ ಇರುತ್ತಾರೆ. ಕಾಲ ಸಾಕಷ್ಟು ಕೊಡಬಿಲ್ಲವೆಂದು ಬೇರೆ ಹೇಳಿದರು. ಈಗ ಎಷ್ಟು ದಿವಸಗಳ ಕಾಲ ಚರ್ಚೆಗೆ ಅವಕಾಶ ಒದಗಿಸಿಕೊಟ್ಟಿದೆ ಎಂದು ನೋಡಿದರೆ ಹಿಂದಿನ ಆಯವ್ಯಯ ಅಧಿವೇಶನಕ್ಕಿಂತ ಹೆಚ್ಚಿನ ದಿವಸಗಳನ್ನೂ ಹೆಚ್ಚಿನ ಕಾಲವನ್ನು ಕೊಟ್ಟಿದೆ ಈಗ ಎರ್ಲಾ ಸದಸ್ಯರೂ ಮಾತನಾಡಬೇಕೆಂದು ಅಪೇಕ್ಷೆಪಡುತ್ತಾರೆ. ಆದರೆ ಇವತ್ತು ಚರ್ಚೆಯಾಗುವ ರೀತಿನೀತಿಯನ್ನು ನಾನು ವ್ಯೆಯಕ್ತಿಕವಾಗಿ ಒಪ್ಪುವುದಿಲ್ಲ. ಕಾರಣ ಇಷ್ಟೆ. ಈ ದೇಶದ ನ್ಯಾಯಾಂಗಕ್ಕೆ ಹಣ ಒದಗಿಸಿಕೊಳ್ಳಬೇಕಾದುದು, ಕಾರ್ಮಿಕ ಇರಾಖೆಗೆ ಹಣ ಒದಗಿಸಿಕೊಳ್ಳಬೇಕಾದುದು, ಜನರ ಆರೋಗ್ಯ ಇರಾಖೆಗೆ ಹಣ ಕೊಡತಕ್ಕದ್ದು ಈ ವಿಚಾರವಾಗಿ ಮಾತನಾಡಬೇಕು. ಆದರೆ ಕಳೆದ ಒಂದು ವರ್ಷದಲ್ಲಿ ಏನು ಆದತದಲ್ಲಿ ನಡೆದು ಬಂದಿದೆ, ಅದನ್ನು ಚರ್ಚೆ ಮಾಡುವುದೇ ಆಗಿದೆ. ಅದರ ಜೊತೆಗೆ ಸಪ್ಲಿಮೆಂಟರಿ ಡಿಮ್ಯಾಂಡ್ ಇವೆಲ್ಲವೂ ಒಂದೇ ದಿವಸದಲ್ಲಿ ಚರ್ಚೆಯಾಗ ಬೇಕು ಮತ್ತು ಆ ಚರ್ಚೆಯನ್ನು ಯಾರು ಪ್ರಾರಂಭಿಸುತ್ತಾರೋ ಅವರು ಅದನ್ನು 15 ನಿಮಿಷಗಳಲ್ಲಿ ಮುಗಿಸಬೇಕಾಗಿದೆ. ನ್ಯಾಯಾಂಗ ವಿಚಾರವಾಗಿ ಮಾನ್ಯ ಶ್ರೀ ಶ್ರೀಕಂಠಯ್ಯನವರು ಮಾತನಾಡು ತ್ತಿದ್ದರು, ವ್ಯೆಯಕ್ತಿಕವಾಗಿ ಹೇಳಿದರೆ ಈ ಸಭೆಯಲ್ಲಿ ಸ್ವಂತ ಸಂಪರ್ಕವಿಟ್ಟುಕೊಂಡು ಮಾತನಾಡು ವವರು ಬಹಳ ಕಡಿಮೆ. ಮಾನ್ಯ ಶ್ರೀ ಶ್ರೀಕಂಠಯ್ಯನವರು ಬಾರ್ ಅಸೋಸಿಯೇಷನ್ ಅಧ್ಯಕ್ಷರು ಆಗಿದ್ದಾರೆ ಮತ್ತು ಬಹಳ ಕಾಲದಿಂದ ವಕೀಲರು ಆಗಿದ್ದಾರೆ. ನಿಕಟ ಸಂಪರ್ಕ ಹೊಂದಿರುವವ ರಿಬ್ಬರೂ ನ್ಯಾಯಾಂಗ ಇರಾಖೆಯಲ್ಲಿ ಯಾವ ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಶಕ್ತರು. ಅವರಿಗೂ ಕಾರಾಪಕಾಶವನ್ನು ಸಾಕಷ್ಟು ಕೊಟ್ಟಿಲ್ಲ. ವಿಧಿಯಿಲ್ಲ. ಇದಕ್ಕೆ ಯಾರು ಕಾರಣರೋ, ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಬೇರೆ ಬೇರೆ ಕಾರಣ ಗಳಿಂದ ಈ ಸಭೆಯಲ್ಲಿ ಕ್ಲಿಪ್ತ ಕಾಲಕ್ಕೆ ಯಾವ ಯಾವ ನಿರ್ದಿಷ್ಟವಾದ ಕಾರ್ಯಕ್ರಮಗಳು ಆಗ ಬೇಕಾಗಿತ್ತೋ ಆ ಕಾರ್ಯಕ್ರಮಗಳನ್ನು ಮುಗಿಸುವುದಕ್ಕೆ ಸಾಧ್ಯವಾಗದೇ ಇದ್ದುದರಿಂದ ಇವತ್ತು ಈ ಪರಿಸ್ಥಿತಿ ಬಂದಿದೆ. ಇದು ಯಾರೂ ಒಬ್ಬರ ಹತೋಟಿಯಲ್ಲಿರಲಿಲ್ಲ. ಈ ಸಭೆ ಯಾವ ರೀತಿಯಲ್ಲಿ ಕಾರ್ಯಕ್ರಮಗಳನ್ನು ನಡೆಸಬೇಕೆಂದಿತ್ತೋ ಅವು ಸಕಾಲದಲ್ಲಿ ಮುಗಿಯಲಿಲ್ಲ. ಹೀಗೆ ಎರ್ಲಾ ಕೆಲಸಗಳೂ ಇವತ್ತು ಒಂದೇ ದಿನ ಬಂದಿದೆ. ಇದಕ್ಕೆ ಬಿಜಿನಸ್ ಅಡ್ವೈಜರಿ ಕಮಿಟಿ ಒಪ್ಪಿಗೆಯೂ ಸಹ ಇರಲಿಲ್ಲವೆಂದು ಮಾನ್ಯ ಶ್ರೀ ಶಿವಪ್ಪನವರು ಹೇಳಿದರು. ಆಗಾಗ್ಗೆ ಬದಲಾವಣೆಗಳು ಆಗು ತ್ತವೆ. ಬಿಜಿನೆಸ್ ಅಡ್ವೈಜರಿ ಕಮಿಟಿ ಇವತ್ತು ಎರಡು ಸಾರಿ ಕೂಡಬೇಕೆಂದಿದೆ. ಇವತ್ತು ಯಾವ ಕಾರ್ಯಕ್ರಮಗಳು ಪಟ್ಟಿಯಲ್ಲಿ ಇದೆಯೋ ಆ ಕಾರ್ಯಕ್ರಮಗಳು ಮುಗಿಸಬೇಕೆಂದಿದೆ. ಒಂದು ಆಕ್ಷೇಪಣೆ ಎಂದರೆ ಜನಾರೋಗ್ಯ ವಿಚಾರವಾಗಿ ಚರ್ಚೆಯಾಗುವುದಕ್ಕೆ ಒಪ್ಪಿರಲಿಲ್ಲ. ಅದನ್ನೂ ಕೂಡ ಇವತ್ತು ತೆಗೆದುಕೊಳ್ಳಬೇಕೆಂದೂ ಆಗಿದೆ. ಇನ್ನೊಂದು ಸಪ್ಲಿಮೆಂಟರಿ ಡಿಮ್ಯಾಂಡ್ ಸಹ ಬರುತ್ತದೆ. It is something like a bolt from the blue. ಈಗ ಹಠಾತ್ತನೆ ಇದಕ್ಕೆ ಒಪ್ಪಿ ಎಂಬುದಾಗಿ ಹೇಳಿದರೆ, ಯಾವ ನ್ಯಾಯವೆಂದು ಹೇಳಿದರು. ಪ್ರೊವಿಷನ್ಸ್ ಪ್ರೋಗ್ರಾಂ ಆಫ್ ಬಿಜಿನಸ್‌ನಲ್ಲ ವೋಟ್ ಆನ್ ಸಪ್ಲಿಮೆಂಟರಿ ಗ್ರಾಂಟ್ ಫಾರ್ 68–69 ಸೇರಿದೆ.

Sri H. SIDDAVEERAPPA.—It has been superseded.

ಶ್ರೀ ಕೆ. ಪುಟ್ಟಸ್ವಾಮಿ.—ಅದು ಹೇಗೆ ಸೂಪರ್‌ಸೀಡ್ ಆಯಿತೋ ನನಗೆ ಗೊತ್ತಿಲ್ಲ. ಕಾರ್ಯ ಕ್ರಮ ಪಟ್ಟಿಯಲ್ಲಿ ಏನೇನು ಸೇರಿದೆಯೋ, ಇವತ್ತು ಏನೇನು ಕಾರ್ಯಕ್ರಮ ಇಟ್ಟಿದ್ದಾರೋ ಅದು ಹಿಂದೆ ಚರ್ಚೆಮಾಡಿ ಒಪ್ಪಿಕೊಂಡಿದ್ದಕ್ಕೆ ಅನುಗುಣವಾಗಿದೆ.

ಶ್ರೀ ಎಸ್. ಶಿವಪ್ಪ.—ಮಾನ್ಯ ಮಂತ್ರಿಗಳು ಹೇಗೆ ಬೇಕಾದರೂ ಅರ್ಗ್ಯೂ ಮಾಡುತ್ತಾರೆ. ಈ ಸಪ್ಲಿಮೆಂಟರಿ ಎಸ್ಟಿಮೇಟ್ಸ್‌ಗೆ ಬಿಜಿನಸ್ ಅಡ್ವೈಜರಿ ಕಮಿಟಿಯಲ್ಲಿ ಎಷ್ಟು ಕಾಲ ಕೊಟ್ಟಿತ್ತು ? ಯಾವಾಗ ನಿರ್ಣಯವಾಯಿತು ? ನಮ್ಮನ್ನೇನಾದರೂ ಕೇಳಿದ್ದಿರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಹಿಂದೆ ಒಂದು ಬಿಜಿನಸ್ ಅಡ್ವೈಜರಿ ಕಮಿಟಿ ಮೀಟಿಂಗ್ ಆದಾಗ ಯಾಪುದೋ ಕಾರ್ಯನಿಮಿತ್ತ ನಾನು ಹಾಜರಾಗಿರಲಿಲ್ಲ. ಈಗ ಒಂದು ಕಾರ್ಯಕ್ರಮ ಪಟ್ಟಿ ಇದೆ. ಇವಕ್ಕೆ ಯಾವ ಚೌಕಂ ನಹ ಬೇಕಾಗಿಲ್ಲ. 24ನೇ ಫೆಬ್ರವರಿಯಿಂದ ಹಿಡಿದು ಇದುವರೆಗೆ ಸರ್ಕಾರ ಹಣ ಕಾಸಿನ ನೀತಿ, ಸರ್ಕಾರ ಅಡಳಿತ ನಡೆಸುವ ನೀತಿಯನ್ನು ಸಂಪೂರ್ಣವಾಗಿ ಚರ್ಚೆಮಾಡಿದೆ. ನಾಳೆ ಅಪ್ರೊಪ್ರಿಯೇಷನ್ ಬಿಲ್ ಬರುತ್ತದೆ. ಈ ನಭೆಯ ಕಾರ್ಯಕಲಾಪಗಳನ್ನು ನೋಡಿದರೆ ಸುಮಾರು ಒಂದು ತಿಂಗಳಿಗೆ ಮೇಲ್ಪಟ್ಟು ನಮ್ಮ ಅಡಳಿತದ ಹಣಕಾಸಿನ ನೀತಿಯ ಬಗ್ಗೆ ಚರ್ಚೆ ಯಾಗಿರುವಾಗ ಸಪ್ಲಿಮೆಂಟರಿ ಡಿಮ್ಯಾಂಡ್ಸ್‌ಗೆ ಅಷ್ಟು ವೇಳೆ ಬೇಕಾಗಿರುವುದಿಲ್ಲವೆಂದು ನನ್ನ ಅಭಿ ಪ್ರಾಯ. ಈ ಸಮಯದಲ್ಲಿ ನಾನು ಹೆಚ್ಚು ಜಿಜ್ಞಾಸೆಯನ್ನುಂಟುಮಾಡುವುದಕ್ಕೆ ಹೋಗುವುದಿಲ್ಲ. ವಿರೋಧ ಪಕ್ಷದ ನಾಯಕರು ನಮ್ಮೊಡನೆ ಸಹಕರಿಸಿದ್ದಾರೆ.

ಈ ಹಣಕಾಸಿನ ನೀತಿ ಚರ್ಚೆಯಾಗುವ ಕಾಲದಲ್ಲಿ ಉದ್ವೇಗ ನಹಜ, ಭಿನ್ನಾಭಿಪ್ರಾಯ ನಹಜ, ಮಾತಿಗೆ ಮಾತು ಬರುವುದು ಸಹಜ, ಚಕಮಕಿ ಬರುವುದು ಸಹಜ, ತಿಕ್ಕಾಟವಾಗುವುದು ನಹಜ. ಈಗ ಎಲ್ಲಾ ಮುಗಿಯುತ್ತಾ ಬಂದಿದೆ. ಮಾನ್ಯ ನದಸ್ಯರಲ್ಲಿ ಒಂದು ವಿನಂತಿ, ಏನೆಂದರೆ, ದಯ ವಿಟ್ಟು ಇಷ್ಟರವರೆಗೆ ಸಹಕಾರ ಕೊಟ್ಟಿದ್ದೀರಿ ಅದೇ ರೀತಿ ಮುಂದೆಯೂ ಮುಗಿಸಿಕೊಡ ಬೇಕಾಗಿ ಕೇಳಿಕೊಳ್ಳುತ್ತೇನೆ.

Mr. SPEAKER.—I request leaders of both sides to meet me in my chamber. I am retiring now.

[Mr. DEPUTY SPEAKER in the Chair]

Demand Nos. 9, 11, 26, and 28

(Discussion Contd.)

ಶ್ರೀ ಎಂ. ಎಸ್. ಕೃಷ್ಣನ್.—ಸ್ವಾಮಿ, ನಾನು ಒಂದು ವಿಷಯ ಹೇಳುತ್ತಿದ್ದೆ. ಏನೆಂದರೆ ಕಾಸ್ಟ್ ಆಫ್ ಇಂಡೆಕ್ಸ್ ಬಗ್ಗೆ ತಾವು ಎಕ್ಸ್‌ಪರ್ಟ್ ಕಮಿಟಿ ನೇಮಕ ಮಾಡಿದ್ದೀರಿ. ಅದು ಒನ್ ಮ್ಯಾನ್ ಕಮಿಟಿ ಶ್ರೀಮಾನ್ ಡಿಸೊಜಾ ಅವರು ಆ ಕಮಿಟಿಯಲ್ಲಿದ್ದರು ಅದರ ವರದಿ ಕೂಡ ಬಂದಿದೆ. ಇದರ ಬಗ್ಗೆ ಸರ್ಕಾರದವರ ನಿಲುವು ಏನೆಂದು ಸ್ಪಷ್ಟವಾಗಿ ಹೇಳಬೇಕು. ನನಗೆ ತಿಳಿದಿ ರುವ ಪ್ರಕಾರ. 10—12 ಪಾಯಿಂಟ್ ಕೆಲನಗಾರರಿಗೆ ಅನುಕೂಲವಾಗುತ್ತದೆ. ಅದನ್ನು ಏಕೆ ಮುಚ್ಚಿಟ್ಟಿದ್ದೀರಿ ಎಂಬುದನ್ನು ಹೇಳಬೇಕು.

ಇನ್ನೊಂದು ಏನೆಂದರೆ, ಚ್ರೆಬ್ಯೂನಲ್ಸ್ ಮತ್ತು ಲೇಬರ್ ಕೋರ್ಟುಗಳಿವೆ. ಪೇಮೆಂಟ್ ಆಫ್ ವೇಜಸ್ ಆಕ್ಟ್, ವರ್ಕ್‌ಮೆನ್ಸ್ ಕಂಪನ್ಸೇಶನ್ ಆಕ್ಟ್, ಇದನ್ನು ಇತ್ಯರ್ಥ ಮಾಡುವುದಕ್ಕೆ ಬೇರೆ ಕೋರ್ಟಿಗೆ ಕೊಟ್ಟಿದ್ದಾರೆ. ಅದನ್ನು ಈ ಕೋರ್ಟುಗಳಿಗೂ ಕೊಡಬೇಕು. ಹಾಗೆ ಮಾಡಿ ದರೆ, ಬಹಳ ಬೇಗನೆ ಅಂಥ ಕೇಸುಗಳನ್ನು ಇತ್ಯರ್ಥ ಮಾಡುವುದಕ್ಕಾಗುತ್ತದೆ. ಆದ್ದರಿಂದ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಕೋರ್ಟುಗಳಿಗೂ ಇದನ್ನು ತೆಗೆದುಕೊಳ್ಳಲು ಅಧಿಕಾರ ಕೊಡ ಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಪುಟ್ಟದಾಸ (ಸಾತನೂರು)—ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮುಂಡಿಸಿರ ತಕ್ಕ ಆರೋಗ್ಯ ಇಲಾಖೆಯ ಬೇಡಿಕೆಯನ್ನು ವಿರೋಧಿಸುತ್ತಾ ಕೇವಲ ಮೆಡಿಕಲ್ ಮತ್ತು ಪಬ್ಲಿಕ್ ಹೆಲ್ತ್‌ಗಳ ಮೇಲೆ ಮಾತನಾಡಬೇಕೆಂದಿದ್ದೇನೆ. ಆದರೆ ನಾನು ತಮ್ಮ ಮೂಲಕ ಸರ್ಕಾರದವರನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ, ಹೋದ ಸಾರಿ ಕ್ವಾರಿಫಿಕೇಷನ್‌ಗೆ ಅವಕಾಶ ಇರಲಿಲ್ಲ. ಈ ಸಾರಿ ಆ ರೀತಿ ಆಗದೆ ಇರಲ ಎಂದು ನಾನು ಹೇಳುತ್ತೇನೆ. ಈ ಒಂದು ಇಲಾಖೆ ಪ್ರತಿಯೊಬ್ಬರೂ ಸ್ವಲ್ಪ ಅನುಕಂಪ ತೋರಿನಬೇಕಾದಂತಹ ಇಲಾಖೆಯಾಗಿದೆ. ಆದರೆ ಪ್ರತಿಯೊಬ್ಬರ ಅಭಿಪ್ರಾಯವೇನೆಂದರೆ ದಿವಂಗತ ಡಾ. ಕೆ. ಕೆ. ಹೆಗ್ಗಡೆಯವರ ನಂತರ ಬಂದಿರುವವರೆಲ್ಲಾ ಮಿನಿಸ್ಟರ್ ಫಾರ್ ಹೆರ್ತ್ ಆಗಿ ಕೆಲನಮಾಡಿಲ್ಲ. ಅವರೆಲ್ಲರೂ ಮಿನಿಸ್ಟರ್ ಫಾರ್ ಟ್ರಾನ್ಸ್‌ಫರ್ಸ್ ಅಂಡ್ ಪ್ರೊಮೋಶನ್ಸ್ ಆಗಿ ಕೆಲಸ ಮಾಡಿದ್ದಾರೆ ಎಂದು ಪೀಠಿಕೆಯನ್ನು ಕೊಡುತ್ತಾ ನನ್ನ ಮಾತುಗಳನ್ನು ಮುಂದುವರಿಸು ತ್ತೇನೆ. ಆದರೂ ಇದನ್ನು ವಿರೋಧಿಸುವಾಗಲೂ ಸರ್ಕಾರದವರು ಒಂದೆರಡು ಒಳ್ಳೆಯ ಕೆಲನ